ಮಹಾನುಭಾವರು ಬರುತ್ತಿದ್ದರು, ಭಾಷಣ ಮಾಡಿ ಹೋಗುತ್ತಿದ್ದರು ಎಂಬುದರ ಬಗ್ಗೆ ಟೆಂಪೊಗಳಲ್ಲಿ ಬಂದವರ್‍ಯಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಉರಿಬಿಸಿಲ ಝಳಕ್ಕೆ ತಮ್ಮ ಸೆರಗನ್ನೇ ತಲೆಮೇಲೆ ಹೊದ್ದು ತಮ್ಮ ಕಷ್ಟ ಸುಖಗಳನ್ನು ಪರಿಚಯವಿಲ್ಲದಿದ್ದರೂ ಸರಾಗವಾಗಿ ಮಾತನಾಡಿಕೊಳ್ಳುತ್ತಿದ್ದರು. ಒಂದಿಷ್ಟು ಪಡ್ಡೆ ಹುಡುಗರು ಸಿಳ್ಳೆ, ಕೇಕೆ ಹಾಕುತ್ತ ಭರ್ಜರಿ ಕುಣಿಯುತ್ತಿರುತ್ತಿದ್ದರು. ಇದನ್ನೆಲ್ಲಾ ನೋಡುವುದೇ ನನಗೊಂದು ರೀತಿಯಲ್ಲಿ ಮಜವಾಗಿರುತ್ತಿತ್ತು.

ಒಮ್ಮೊಮ್ಮೆ ಅದೃಷ್ಟ ಕೈಕೊಟ್ಟಾಗ ಎಷ್ಟೇ ಹೊತ್ತು ಕಾದರೂ ಕಾರ್ಯಕ್ರಮಕ್ಕೆ ಅತಿಥಿಯೇ ಬರದೆ ಬರಿಗೈಲಿ ವಾಪಸ್ಸು ಬಂದಿದ್ದೂ ಇದೆ. ರುಕ್ಕುಬಾಯಿ ನನ್ನನ್ನು ಎಷ್ಟೇ ದೂರದ ಊರಿಗೆ ಕರೆದುಕೊಂಡು ಹೋದರೂ ಶಾಲೆ ಬಿಡುವುದೊರಳಗೆ ನನ್ನನ್ನು ವಾಪಸ್ಸು ಕರೆತರುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ವಾಪಸ್ಸು ಬರುತ್ತಲೇ ಎಂಟಾಣೆಯ ಎರಡು ಮಹಾಲೆಕ್ಟ್ರೋ, ಒಂದೆರಡು ಹಿಡಿ ಬುಗುರಿ ಹಣ್ಣನ್ನು ಕೊಟ್ಟು ಮನೆಗೆ ಕಳಿಸುತ್ತಿದ್ದಳು. ಶಾಲೆ ತಪ್ಪಿದ್ದೂ ಅಲ್ಲದೆ, ಕೈತುಂಬಾ ಬುಗುರಿ ಹಣ್ಣು, ಎರಡು ಪೆಪ್ಪರುಮೆಂಟು ಬೇರೆ!

ಒಂದು ದಿನ ಹೀಗೆಯೇ ಶಾಲೆಗೆ ಗೈರಾಗಿ ನಾನು ಮತ್ತು ರುಕ್ಕುಬಾಯಿ ಮುಂಡಗೋಡಿಗೆ ಹೋಗಿದ್ದೆವು. ಮುಂಡಗೋಡಿನ ಸರ್ಕಾರಿ ಶಾಲೆಯ ಹತ್ತಿರವಿರುವ ಮೈದಾನದ ಜನಜಂಗುಳಿಯ ನಡುವೆ ಕುಳಿತು ಚಪ್ಪಾಳೆ ಹೊಡೆಯುತ್ತಿರುವಾಗ ಹಿಂಬದಿಯಿಂದ ಬಂದ ಪಾತಿಚಿಕ್ಕಿ ನನ್ನ ಬೆನ್ನಿಗೆರಡು ಗುದ್ದಿ, ಮನೆಗೆ ಕರೆದೊಯ್ದು ಅಪ್ಪನಿಗೆ ವಿಷಯವನ್ನೆಲ್ಲಾ ಹೇಳಿ ರಂಪ ಎಬ್ಬಿಸಿದ್ದಳು. ಅನ್ಯಾಯವಾಗಿ ತನಗೆ ಬರಬೇಕಿದ್ದ ದುಡ್ಡೆಲ್ಲಾ ಮತ್ಯಾವುದೋ ಹೆಂಗಸಿನ ಪಾಲಾಯ್ತಲ್ಲ ಎಂದು ಅಪ್ಪನಿಗೆ ಚಿಂತೆಯಾದರೆ ಶಾಲೆ ಕಲಿಯಲು ಮನಸ್ಸಿಲ್ಲದಿದ್ದರೆ ಮನೆಯಲ್ಲೇ ಇದ್ದು ಕೆಲಸಕ್ಕಾದರೂ ಸಹಾಯ ಮಾಡಲೇನು ಧಾಡಿ ಎಂದು ಅಮ್ಮನ ಯೋಚನೆಯಾಗಿತ್ತು.

'ಹೀಗೆ ಊರು ತಿರಕಲಿಯಾದರೆ ಈಗಲ್ಲ ನಿನಗೆ ಪಾಡು ತಿಳಿಯುವುದು, ತಿಳಿದಾಗ ತಿದ್ದಿಕೊಳ್ಳಲು ಅವಕಾಶವಿಲ್ಲದ ಹಾಗೆ ಬದುಕು ಮುನ್ನಡೆದಿರುತ್ತದೆ' ಎಂದು ತಿಳಿಹೇಳಿದ ಪಾತಿಚಿಕ್ಕಿ, ಅಪ್ಪಅಮ್ಮನನ್ನು ಹೇಗೋ ಮಾಡಿ ಒಪ್ಪಿಸಿ ನನ್ನನ್ನು ಮಂಚಿಕೇರಿಯ ತನ್ನ ಮನೆಗೆ ಕರೆದೊಯ್ದು, ಅಲ್ಲಿಯೇ ಶಾಲೆಗೆ ಹೆಸರು ಹಚ್ಚಿಸಿ ತಮ್ಮ ಮನೆಯಲ್ಲಿಯೇ ಇರುವಂತೆ ನೋಡಿಕೊಂಡಿದ್ದಳು.

ನಾನು ಪಾತಿಚಿಕ್ಕಿಯ ಮನೆ ಸೇರಿದಾಗ ಅವಳಿಗೆ ಆಗತಾನೇ ಮದುವೆಯಾಗಿ ಎರಡು ತಿಂಗಳಷ್ಟೇ ಕಳೆದಿತ್ತು. ತೋರಣಕ್ಕೆಂದು ಬಿಗಿದಿದ್ದ ಮಾವಿನ ತುಮಕೆ ತೆಂಗಿನ ಮರದ ಬುಡದಲ್ಲಿನ್ನೂ ಕೊಳೆತಿರಲಿಲ್ಲ. ಡಬ್ಬದಲ್ಲಿರುವ ಮದುವೆಯ ಬೂಂದಿಲಾಡಿಗೆ ಬಿಳಿಯ ಗಡ್ಡ ಮೀಸೆ ಆಗತಾನೇ ಮೂಡುತ್ತಿತ್ತು.

ಅಪರೂಪಕ್ಕೆಲ್ಲೋ ಒಂದೆರಡು ಬಾರಿ ಪಾತಿಚಿಕ್ಕಿಯ ಮನೆಗೆ ಅಮ್ಮನೊಂದಿಗೆ ಬಂದಿದ್ದು ಬಿಟ್ಟರೆ ಉಳಿದುಕೊಂಡಿದ್ದು ಇದೇ ಮೊದಲು. ಚಿಕ್ಕಿಯ ಮನೆ ಬಹಳ ದೊಡ್ಡದಿತ್ತು, ಭೂತಬಂಗಲೆಯಂತೆ ಹೋದಲ್ಲೆಲ್ಲಾ ಮೌನವೇ ತುಂಬಿರುತ್ತಿತ್ತು. ಆದರೆ ಮನೆ ಅಳಿಯನಾಗಿ ಸೇರಿದ ಕಾಕಾ ಮಾತ್ರ ಪಕ್ಕಾ... ಪಕ್ಕಾ ಕಾಗೆಯಂತೆಯೇ ಇದ್ದ! ಬಣ್ಣದ ಬಗ್ಗಲ್ಲ ಹೇಳಿದ್ದು, ಒಂದಲ್ಲಾ ಒಂದು ಸಣ್ಣಪುಟ್ಟ ಕಾರಣಕ್ಕೂ ಕರ್‍ರಾ ಕಾ ಎಂದು ಕೊರಗುಡುತ್ತಲೇ ಇರುತ್ತಿದ್ದ. ಎಂತಹದ್ದೂ ವಿಷಯ ಸಿಗದಿದ್ದರೆ, 'ಮನೆ ಅಳಿಯನಾಗಲು ಒಪ್ಪಲೇಬಾರದಿತ್ತು, ಅಪರೂಪಕ್ಕೆ ಬಂದು ಹೋಗುವ ಅಳಿಯನಿಗೆ ಮಾತ್ರ ಕಿಮ್ಮತ್ತು. ಇಲ್ಲದಿದ್ದರೆ ಹೀಗೆ ಸದ್ರ ಮಾಡಿಬಿಡುತ್ತಾರೆ' ಎಂದು ಹಳಿದುಕೊಳ್ಳುತ್ತ ಒಂದು ನಿಮಿಷವೂ ಕೂರದೆ ಒಂದಲ್ಲಾ ಒಂದು ಕೆಲಸವನ್ನು ಹುಡುಕಿ ಮಾಡುತ್ತಾ, ಹೊಗೆಸೊಪ್ಪಿನ ಚೂರನ್ನು ಬಾಯಿಗಿಡುವ ಮೊದಲು ಹೊಗೆಸಪ್ಪಿನ ದಂಟೊಂದನ್ನೆಳೆದು ಮೂಗಿನ ಹೊರಳೆಗಳಿಗೊಮ್ಮೆ ಇಳಿಬಿಟ್ಟು, ಹಾಕ್ಶೋ... ಎಂದು ಸೀನಿ ಮುಂಡಿನ ತುದಿಯಲ್ಲೇ ಮೂಗುದ್ದುತ್ತಿರುತ್ತಿದ್ದ. ಅಲ್ಲಿಯೇ ಕುಳಿತು ಗೆರಶಿ ತುಂಬಾ ಅಕ್ಕಿ